ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

354 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ನಗರ ಸಭೆಯ ವ್ಯಾಪ್ತಿಯಲ್ಲಿ ಬಂದ ಪ್ರದೇಶಗಳಿಗೂ ಸಹ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ವತಿಯಿಂದ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ತೆಗೆದುಕೊಂಡಿರುವುದು, ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಇಂತಹ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ?*

ಇ) *ಬೀದರ್ ಜಿಲ್ಲೆಯ ಔರಾದ್ ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದರಿಂದ ಇಲ್ಲಿಗೂ ಸಹ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ, ನೀರು ಸರಬರಾಜು ಯೋಜನೆಗೆ ವಿಶೇಷ ಮಂಜೂರಾತಿಯನ್ನು ನೀಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಅಫಜಲ್‌ಪುರ ಚಂಚೋಳಿ, ಜೇವರ್ಗಿ, ಚಂಚಾಪುರ ಪಟ್ಟಣಗಳಲ್ಲಿ ನೀರು ಸರಬರಾಜು ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಣಕಾಸು ವ್ಯವಸ್ಥೆ ಮಾಡಲಾಗಿದೆ.

ಇ) ಸದ್ಯದಲ್ಲಿ ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಎನ್.ಜಿ.ಇ.ಎಫ್. ಅನ್ನು ಬಹುರಾಷ್ಟ್ರೀಯ ಕಂಪನಿಗೆ ಒಪ್ಪಿಸುವ ಬಗ್ಗೆ

175 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಎನ್.ಜಿ.ಇ.ಎಫ್. ಕಾರ್ಖಾನೆಯನ್ನು ಬಹುರಾಷ್ಟ್ರೀಯ ಕಂಪನಿ ವಲಕ್ಕೆ ಒಪ್ಪಿಸಲು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಯೇ?*

ಆ) *ಹಾಗಿದ್ದರೆ, ಇದಕ್ಕೆ ಕಾರಣಗಳೇನು?*

ಇ) *ಈ ಕಾರ್ಖಾನೆಯಲ್ಲಿ ಕೆಲಸ ಮಾಡುವ ನೌಕರರ ಒಟ್ಟು ಸಂಖ್ಯೆ ಎಷ್ಟು?*

ಈ) *ಈ ನೌಕರರ ಹಿತವನ್ನು ಕಾಪಾಡು ಸರ್ಕಾರದವರು ಯಾವ ಕ್ರಮ ಕೈಗೊಂಡಿರುತ್ತಾರೆ?*

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಎನ್.ಜಿ.ಇ.ಎಫ್. ನಿಯಮಿತದ ಪುನರ್ವಸತೀಕರಣದ ಹಲವಾರು ಪರ್ಯಾಯಗಳು ಸರ್ಕಾರದ ಪರಿಶೀಲನೆಯಲ್ಲಿದೆ. ಅಲ್ಲದೆ, ಈ ಪ್ರಕರಣವು ರೋಗಗ್ರಸ್ಥ ಕೈಗಾರಿಕಾ ಕಂಪನಿಗಳ (ವಿಶೇಷ ಉಪಬಂಧಗಳು) ಅಧಿನಿಯಮದ ಪ್ರಕಾರ ಬಿ.ಐ.ಎಫ್.ಆರ್. ಮುಂದೆಯೂ ಸಹ ಇದೆ.

ಆ) ಉದ್ಭವಿಸುವುದಿಲ್ಲ.

ಇ) 5679 (31-12-1994 ರಲ್ಲಿದ್ದಂತೆ)

ಈ) ಎನ್.ಜಿ.ಇ.ಎಫ್. ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರೀ ಕಂಪನಿಯ ಪುನರ್‌ವಸತೀಕರಣ ಯೋಜನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಕೋರಮಂಗಲದಲ್ಲಿ ನಿರ್ಮಿಸಲಾಗುವ ಮನೆಗಳು

177 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಕೋರಮಂಗಲದಲ್ಲಿ ರಾಷ್ಟ್ರೀಯ ಕ್ರೀಡೆಗಾಗಿ ಗೃಹ ನಿರ್ಮಾಣ ಯೋಜನೆಯನ್ನು ಪ್ರಾರಂಭಿಸಲಾಗಿದೆಯೆ?*

ಆ) *ಈ ಯೋಜನೆಯಡಿಯಲ್ಲಿ ನಿರ್ಮಿಸಲಾಗುವ ಫ್ಲಾಟ್‌ಗಳ ಸಂಖ್ಯೆ ಎಷ್ಟು?*

ಇ) *ಈ ಯೋಜನೆಗೆ ಹುಡ್ಕೋದಿಂದ ನೆರವನ್ನು ಪಡೆಯಲಾಗಿದೆಯೇ?*

ಈ) *ಹಾಗಿದ್ದಲ್ಲಿ ಎಷ್ಟು ಹಣವನ್ನು ಹುಡ್ಕೋ ಈ ಯೋಜನೆಗೆ ನೀಡುವುದು. ಈ ಯೋಜನೆಗೆ ಸ್ವಾಧೀನ ಪಡಿಸಿಕೊಂಡಿರುವ ಜಮೀನೆಷ್ಟು?*

ಉ) *ಈ ಜಮೀನುಗಳಲ್ಲಿ ವಾಸಮಾಡುತ್ತಿರುವ ಕೊಳಚೆ ನಿವಾಸಿಗಳಿಗೆ ಪುನರ್‌ವಸತಿ ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಊ) *ರಾಷ್ಟ್ರೀಯ ಕ್ರೀಡೆಗಳ ನಂತರ ಈ ಮನೆಗಳನ್ನು ಮಾರಲಾಗುವುದೇ?*

ಋ) *ಹಾಗಿದ್ದಲ್ಲಿ ಈ ಮನೆಗಳನ್ನು ಮಾರತಕ್ಕ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆಯೇ ಅಥವಾ ಹಣಕಾಸಿನ ನೆರವು ನೀಡಲಿರುವ ಹುಡ್ಕೋ ಸಂಸ್ಥೆಗೆ ಇದೆಯೇ?*

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಹೌದು

ಆ) ಒಟ್ಟು 2821

ಇ) ಹೌದು

ಈ) ರೂ. 270 ಕೋ ಸಾಲ

ಉ) 56.27 ಎಕರೆ

ಊ) ಈ ಜಾಗದಲ್ಲಿ ಒಟ್ಟು 294 ಕುಟುಂಬಗಳು ವಾಸಿಸುತ್ತಿದ್ದು 148 ಕುಟುಂಬಗಳನ್ನು ಸ್ಥಳಾಂತರಿಸಲಾಗುವುದು, ಸಾಧ್ಯವಾದಷ್ಟು ಮಟ್ಟಿಗೆ ಅವರಲ್ಲಿ ಕೆಲವರಿಗೆ ಇದೇ ಪ್ರದೇಶದಲ್ಲಿ ಪುನರ್‌ವಸತಿ ಗೊಳಿಸಲಾಗುವುದು ಹಾಗೆಯೇ ಉಳಿದವರನ್ನು ಕೆಲವು ಕಿಲೋಮೀಟರ್‌ಗಳ ದೂರವಿರುವ ಪ್ರದೇಶಕ್ಕೆ ಸ್ಥಳಾಂತರಿಸಲಾಗುವುದು. ಸ್ಥಳಾಂತರಿಸಲಾದ 148 ಕುಟುಂಬಗಳಿಗೆ ಈ ಕೆಳಕಂಡ ನೆರವನ್ನು ನೀಡಲು ಸಹ ನಿರ್ಧರಿಸಲಾಗಿದೆ.

ಅ. 1. ಎಕ್ಸ್‌ಗ್ರೇಷಿಯ ಆಗಿ 5000-00 ರೂ. ಪ್ರತಿ ವಸತಿಗೆ

2. ಕರ್ನಾಟಕ ಗೃಹ ಮಂಡಳಿಯಿಂದ ಪುನರ್‌ವಸತಿ ಗೃಹ ನಿರ್ಮಾಣಕ್ಕೆ ಪ್ರತಿ ವಸತಿಗೆ ರೂ. 15,000 ನೀಡಲಾಗುವುದು. ಈ ಪೈಕಿ ರೂ. 10,000 ಸಾಲದ ರೂಪದಲ್ಲಿ ರೂ. 5,000-00 ಸಹಾಯಧನ ರೂಪದಲ್ಲಿ ಇರುವುದು.

ಆ. ಉಳಿದ 146 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ ಮೇಲೆ ತಿಳಿಸಿದ ರೀತಿಯಲ್ಲಿ ರೂ. 15,000 ನೀಡಲಾಗುವುದು.

ಇ) ಹೌದು. ಕೆಲವು ಮನೆಗಳನ್ನು ಮಾತ್ರ.

ಈ) ಇದಕ್ಕೆ ಬೇಕಾದ ಮಾರ್ಗ ಸೂಚಿಯನ್ನು ಸರ್ಕಾರವು ಹುಡ್ಕೋದೊಂದಿಗೆ ಸಮಾಲೋಚಿಸಿ ನಿಗದಿ ಪಡಿಸುವುದು.